ದಿಃ **24-01-2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ ಃ ಶ್ರೀ ಜಿ. ಎನ್ .ಆರ್ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಲಿಖಿತ ರೂಪದಲ್ಲಿ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ಸತ್ಯ ಹಾಗೂ ಸರಿ ಇರುತ್ತವೆ. ಸದರಿ ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆ ಸಾಕ್ಷಿಯ ಭಾಗವಾಗಿ ಪರಿಗಣಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ.

**ಪಾಟೀ ಸವಾಲುಃ ಪ್ರತಿವಾದಿ ಪರವಾಗಿಃ ಶ್ರೀ ಎನ್.ಎನ್. ವಕೀಲರಿಂದಃ**

ವಾದಿ ನಮ ಲೈಔಟನಿಂದ ನಿವೇಶನ ಖರಿದಿಸಿರುತ್ತಾರೆ ಎಂದರೆ ನಿಜ. ನನ್ನ ತಾಯಿ ಸದರಿ ನಿವೇಶನವನ್ನು ವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನಿಜ. ನನ್ನ ತಾಯಿ ಶಾಂತಮ್ಮ ವಾದಿಗೆ ಬರೆದು ನಿಡಿದ ಖರಿದಿ ಪತ್ರವನು ನೋಡಿದರೆ ಗುರುತಿಸಬಲ್ಲೆ, ನನ್ನ ತಾಯಿಯ ಸಹಿಯನು ಸಹ ನಾನು ನೋಡಿದರೆ ಗುರುತಿಸಬಲೆ. ಸಾಕ್ಷಿ ತನಗೆ ತೊರಿಸಿದ ದಿ 6.10.1998 ರ 2 ಖರಿದಿ ಪತ್ರಗಳ ಮೇಲೆ ಇರುವ ತನ್ನ ತಾಯಿಯ ತಲಾ 6 ಸಹಿಗಳನ್ನು ನೋಡಿ ಸದರಿ ದಾಖಲೆಯನು ಗುರುತಿಸ್ದಿರಿಂದ ಸದರಿ 2 ಖೇರಿದಿ ಪತ್ರಗಳನು ನಿಪಿ–1 ಮತು 2 ಎಂದು ಗುರುತಿಸಲಾಯಿತು. ನಿಪಿ–1 ಖರೇದಿ ಪತ್ರದ ಮೇಲೆ ಇರುವ ಶಾಂತಮ್ಮ ಇವರ 6 ಸಹಿಗಳನು ಒಟ್ಟಾಗಿ ನಿಪಿ–1(ಎ) ಮತು ನಿಪಿ–2 ಖರೇದಿ ಪತ್ರದ ಮೇಲೆ ಇರುವ ಶಾಂತಮ್ಮ ಇವರ 6 ಸಹಿಗಳನು ಒಟ್ಟಾಗಿ ನಿಪಿ–2(ಎ) ಎಂದು ಗುರುತಿಸಲಾಯಿತು. ನಾವು ವಾದಿಗೆ ಮಾರಾಟ ಮಾಡಿದ ನಿವೇಶನಗಳು ಸರ್ವೇ ನಂ 899/1 ಆಸ್ತಿಯಲಿ ಇವೆ. ಸದರಿ ಜಮೀನು ರಾಯಚೂರು ವ್ಯಾಪ್ತಿಯಲಿ ಬರುತದೆ ಎಂದರೆ ನಿಜ. ಸದರಿ ಜಮಿನಿನಲ್ಲಿ ನಾವು ಮಾಡಿದ ಲೈಔಟ್ ಗೆ ಶರಣಬಸವೇಶ್ವರ ಕಾಲೊಾನಿ ಎಂದು ಕರೆಯಲಾಗುತ್ತದೆ ಎಂದರೆ ನಿಜ. ಸದರಿ ಲೆಔಟ್ ನಲಿ ದಾವ ಆಸ್ತಿಗಳಾದ ನಿವೇಶನ ನಂ 49 ಮತ್ತು 50 ಬರುತ್ತವೆ ಎಂದರೆ ನಿಜ. ಸರ್ವೆ ನಂ.899/1 ಜಮೀನನು ನನ್ನ ತಾಯಿ ಖೀರಿದಿಸಿದ್ದರು. ದಾವ ನಿವೇಶನಗಳನ್ನು ಈಗ ವಾದಿಯೇ ಸ್ವಾದಿನತೆ ಹೊಂದಿರುತ್ತಾರೆ ಎಂದರೆ ನಿಜ.

This is a True Copy of the Court Records Online. Authenticated @ districts.ecourtsindia.com/cnr/KARC020009972023/truecopy/order-1.pdf

2. ನನ್ನ ತಾಯಿ ಮಾಡಿದ ಲೆಔಟಿನಲಿ ನಾನು ಅವಳ ಅದಿಕಾರ ಪತ್ರದ ಮೇರೆಗೆ ಕೆಲವೂಂದು ನಿವೇಶನಗಳನು ಮಾರಾಟ ಮಾಡಿರುತೇನೆ ಎಂದರೆ ನಿಜ. ಸರ್ವೆ ನಂ. 899/1 ನಾವು ಸ್ವಂತ ಗಳಿಸಿದ ಆಸ್ತಿ ಆಗಿರುತ್ತದೆ. ವಾದಿ ತಾನು ಖರೀದಿಸಿದ ನಿವೇಶನಗಳಲಿ ಮನೆ ಕಟ್ಟಿಕೂಳಲು ನಾವು ತಕರಾರು ಮಾಡುತ್ತಿದೇವೆ ಎಂದರೆ ಸರಿಯಲ್ಲ. ನಾನು ಉಳಿದ ಪ್ರತಿವಾದಿಯರೊಂದಿಗ ಸೇರಿಕೊಂಡು ವಾದಿಗೆ ತೊಂದರೆ ಕೊಡುತ್ತಿದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

ಓದಿ ಹೇಳಿ ಸಹಿಪಡೆಯಲಾಗಿದೆ

೩ನೇ ಹೆಚ್ಚುವರಿ ಹಿರಿಯ ಮತ್ತು ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ರಾಯಚೂರು.

This is a True Copy of the Court Records Online. Authenticated @ districts.ecourtsindia.com/cnr/KARC020009972023/truecopy/order-1.pdf